# ಆಹಾ ಸುದ್ದಿ!

★ ಸಸಿತೋಟ



ಫ್ಲಾರಿಡಾದ 69 ವರ್ಷದ ಅಜ್ಜಿ ಚಾರ್ಲೋಟ್ ದೇಹದ ಬಹುತೇಕ ಭಾಗದಲ್ಲಿ ಹಚ್ಚೆ ಚುಚ್ಚಿಸಿಕೊಂಡಾಕೆ ಎಂದು ಗಿನ್ನೆಸ್ ದಾಖಲೆ ಸೇರಿದ್ದಾಳಂತೆ. ಈಕೆಯ ದೇಹದ ಶೇ. 98.75ರಷ್ಟು ಭಾಗ ಹಚ್ಚೆಯಲ್ಲಿ ಮುಳುಗಿಹೋಗಿದೆ. ಮುಖ ಹಾಗೂ ಕೈನ ಕೆಲವು ಭಾಗ ಮಾತ್ರ ಮೂಲ ರೂಪದಲ್ಲಿ ಉಳಿದುಕೊಂಡಿವೆಯಂತೆ. ಇನ್ಯಾರಾದರೂ ಪೈಪೋಟಿ ನೀಡಲು ಮುಂದಾದರೆ ಅಜ್ಜಿ ಶೇ. 1.25ರಷ್ಟು ಭಾಗವನ್ನೂ ಕಳೆದುಕೊಳ್ಳಬಹುದು.



ಅಪರೂಪದ ಚಿತ್ರವಿದು. ಜಗತ್ತಿನ ಅತಿ ಎತ್ತರದ ಮನುಷ್ಯ ಟರ್ಕಿಯ ಸುಲ್ತಾನ್ ಕೋಸನ್ (8 ಅಡಿ 9 ಇಂಚು) ಪ್ರಪಂಚದ ಅತ್ಯಂತ ಕುಳ್ಳಗಿನ ಮಹಿಳೆ ಮಹಾರಾಷ್ಟ್ರದ ಜ್ಯೋತಿ ಅಮ್ಗೆ (2 ಅಡಿ 6 ಇಂಚು) ಭೇಟಿ ಮಾಡಿದ ಕ್ಷಣವಿದು. ಅದೂ ಎತ್ತರದ, ಬೃಹತ್ ಗಾತ್ರದ ಈಜಿಪ್ಟ್‌ನ ಪಿರಾಮಿಡ್ ಎದುರು. ಈಜಿಪ್ಟ್‌ನಲ್ಲಿ ಪ್ರವಾಸೋದ್ಯಮ ಪ್ರಚಾರಕ್ಕೆ ಇವರಿಬ್ಬರನ್ನು ಅಲ್ಲಿಯ ಸರ್ಕಾರ ನೇಮಿಸಿಕೊಂಡಿದೆಯಂತೆ.

ಯಾರಿಗೋ ಸೇರಬೇಕಾದ ಪತ್ರಗಳು ಇನ್ನಾರಿಗೋ ಸೇರುವುದು ಹೊಸದಲ್ಲ ಬಿಡಿ. ಆದರೆ ಅಮೆರಿಕದಲ್ಲಿ ವಿಮಾ ಕಂಪೆನಿಯೊಂದು ನಿರುದ್ಯೋಗ ಭತ್ಯೆಯನ್ನು ಮೈಕೆಲ್ ರೈಡರ್ ಎಂಬುವವರಿಗೆ ಕಳಿಸಿತು. ತಿಂಗಳಿಗೆ ಬರೋಬ್ಬರಿ 360 ಡಾಲರ್ ಭತ್ಯೆ. ಆದರೆ ಪುಳಕಗೊಳ್ಳಲು ರೈಡರ್ ಎಂಬುದು ಜರ್ಮನ್ ಶೆಫರ್ಡ್ ನಾಯಿ. ನಾಯಿಯ ಮಾಲೀಕ ಮೈಕೆಲ್ ಎಂಬಾತ ರೈಡರ್ ಈ ಹಣವನ್ನು ಹೇಗೆ ಖರ್ಚು ಮಾಡತ್ತದೋ ಎಂದು ಚಿಂತೆ ಹಚ್ಚಿಕೊಂಡಿದ್ದವನು ಈಗ ಕೊಂಚ ನಿರಾಳವಾಗಿದ್ದಾನಂತೆ. ಕಾರಣ ವಿಮಾ ಕಂಪೆನಿಯವರು ಈಗ ಈ ಸುಳ್ಳು ಹೆಸರು, ವಿಳಾಸ ನೀಡಿ ನಿರುದ್ಯೋಗ ಭತ್ಯೆ ಪಡೆಯುವ ವಂಚಕರ ಹಿಂದೆ ಬಿದ್ದಿದ್ದಾರಂತೆ.

ಜಿರಳೆ ಕಂಡರೆ ಹೆದರಿ ಜಂಪ್ ಹೊಡೆಯುವುದು, ಅಲ್ಲೇ ಕಾದಿರುವ ಹೀರೊ ತೆಕ್ಕೆಗೆ ಸೇರುವುದು ನಮ್ಮ ಸಿನಿಮಾ ನಾಯಕಿಯರಿಗೆ ಮಾತ್ರ ಸೀಮಿತವಾಗಿಲ್ಲ. ಚೀನಾದಲ್ಲಿ ಯುವತಿಯೊಬ್ಬಳು ಕಾರು ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ಕಾರಿನೊಳಗೆ ಜಿರಳೆ ಎಂಬ ಇನ್ನೊಬ್ಬ ಪ್ರಯಾಣಿಕ ಮೀಸೆ ತೋರಿಸಿತಂತೆ. ಅಷ್ಟೇ, ಹೆದರಿದ ಚಾಲಕಿಯನ್ನು ಕಾರಿನ ಸಮೇತ ತೆಕ್ಕೆಗೆ ಸೇರಿಸಿಕೊಂಡಿದ್ದು ಪಕ್ಕದ ಸೇತುವೆ.



ಖ್ಯಾತ ಅಂತರರಾಷ್ಟ್ರೀಯ ಫ್ಯಾಷನ್ ಬ್ರ್ಯಾಂಡ್ ಝಾರಾ ಲುಂಗಿಯ ರೀತಿಯಲ್ಲಿ ಸ್ಕರ್ಟ್ ವಿನ್ಯಾಸ ಮಾಡಿದೆ. ಅಲೆಯಂತೆ ಓಲಾಡುವ ನೆರಿಗೆ, ಮುಂಭಾಗದಲ್ಲಿ ಕಿರಿದಾದ ಸೀಳಿರುವ, ಹಿಂಭಾಗದಲ್ಲಿ ಅಡಗಿರುವ ಝಿಪ್.. ಹೀಗೆ ಈ ವಿನ್ಯಾಸದ ವೈಭೋಗದ ವಿವರಣೆ ಸಾಗುತ್ತದೆ. ಆದರೆ ನಮ್ಮ ದೇಸಿ ಉತ್ಪನ್ನಗಳಿಗೆ ವಿದೇಶಿ ಟಚ್ ಕೊಟ್ಟು ಪ್ರಚಾರ ಮಾಡುವುದು ಇದೇ ಮೊದಲಲ್ಲ ಬಿಡಿ. ಲುಂಗಿಗೆ ಗಂಡಸರ ಸ್ಕರ್ಟ್ ಎಂದು ಕರೆಯಬೇಕೋ, ಸ್ಕರ್ಟ್‌ಗೆ ಮಹಿಳೆಯರ ಲುಂಗಿ ಎಂದು ಕರೆಯಬೇಕೋ, ಕೊಂಚ ಕನ್‌ಫ್ಯೂಷನ್ ಅಷ್ಟೆ.



ಅಮೆರಿಕದ ಬ್ರಿಯಾನ್ ಮತ್ತು ಮಾರಿಯಾ ಜೋಡಿ ಕೋರ್ಟಿನ ವಾಷ್‌ರೂಮಿನಲ್ಲೇ ಮದುವೆಯಾದರಂತೆ. ಮದುವೆಗೆ ಸಹಿ ಹಾಕಲು ಕಾಯುತ್ತಿದ್ದಾಗ ವರನ ತಾಯಿ ವಾಷ್‌ರೂಮಿನಲ್ಲಿ ಉಸಿರಾಡಲು ಕಷ್ಟಪಟ್ಟು ಅಲ್ಲೇ ಕೂತರಂತೆ. ಮದುವೆ ಮುಂದೆ ಹಾಕಿದರೆ ಇನ್ನೂ 45 ದಿನಗಳ ಕಾಲ ಕಾಯಬೇಕು. ಹೊಸದಾಗಿ ದಾಖಲೆಗಳನ್ನು ಸಿದ್ಧಪಡಿಸಬೇಕು. ಹೀಗಾಗಿ ನ್ಯಾಯಾಧೀಶರ ಸಮೇತ ಸಂಬಂಧಪಟ್ಟವರು ವಾಷ್‌ರೂಮಿಗೆ ತೆರಳಿ ಮದುವೆಯ ವಿಧಿವಿಧಾನ ಮುಗಿಸಿದರಂತೆ. ದಾಖಲೆ ಮಾಡುವ ಉದ್ದೇಶ ನಮ್ಮದಾಗಿರಲಿಲ್ಲ ಎಂದು ಈ ಜೋಡಿ ಪದೇ ಪದೇ ಹೇಳಿಕೊಳ್ಳುತ್ತಿದ್ದಾರಂತೆ.